ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 2119/2018

ಚಾಸಾಃ 25 ಪ್ರಾಸಾಃ14

ದಿನಾಂಕಃ 10.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಾರುತಿ ನಾಯ್ಕ |
| ತಂದೆಯ ಹೆಸರು | : | ದತ್ತಾತ್ರೇಯ ನಾಯ್ಕ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಹಿರಿಯ ಮೋಟಾರು ವಾಹನ ನಿರೀಕ್ಷಕರು |
| ವಾಸ ಸ್ಥಳ | : | ಉಡುಪಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು ಆಗಸ್ಟ 2015 ರಿಂದ ಇಲ್ಲಿಯವರೆಗೆ ಹಿರಿಯ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ17-07-2018 ರಂದು ವೃತ್ತ ನಿರೀಕ್ಷಕರು ಕುಂದಾಪುರ ಸರ್ಕಲ್‌ರವರ ಮನವಿ ಮೇರೆಗೆ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ವಾಹನ ಕೆಎ-20-ಬಿ-3040 ಹಾಗೂ ಕೆಎ-20-ಎನ್-2213 ಮೋಟಾರು ವಾಹನವನ್ನು ಪರೀಕ್ಷಿಸಿದ್ದು, ಈ ಕೆಳಕಂಡ ಜಖಂಗಳು ಕಂಡು ಬಂದಿರುತ್ತದೆ.

ವಾಹನ ಕೆಎ-20-ಬಿ-3040 ರಲ್ಲಿ

1. ವಾಹನದ ಮುಂದಿನ ಬಾಡಿ ಜಖಂಗೊಂಡಿರುತ್ತದೆ.
2. ವಿಂಡ್ Screen ಗ್ಲಾಸ್ ಜಖಂಗೊಂಡಿರುತ್ತದೆ.
3. ಬಲ ಬದಿಯ ಹೆಡ್ ಲೈಟ್ ಮತ್ತು ಇಂಡಿಕೇಟರ್ ಜಖಂ ಗೊಂಡಿರುತ್ತದೆ.
4. ಮುಂದಿನ ಬಂಪರ್ ಜಖಂ ಗೊಂಡಿರುತ್ತದೆ.
5. ಬಲ ಬದಿಯ ಮುಂಭಾಗ ಜಖಂಗೊಂಡಿರುತ್ತದೆ,

ಕೆಎ-20-ಎನ್-2213 ವಾಹನದಲ್ಲಿ

1 .ಮುಂದಿನ ಬಾಡಿ ಜಖಂ ಗೊಂಡಿರುತ್ತದೆ.

2. ರೇಡಿಯೇಟರ್, ಹೆಡ್ ಲೈಟ್ ಇಂಡಿಕೇಟರ್, ಕೂಲಿಂಗ್ ಸಿಸ್ಟಮ್, ಬಾನೇಟ್, ವಿಂಡ್ screen glass ಜಖಂಗೊಂಡಿರುತ್ತದೆ.

3. ಮುಂಬದಿಯ ಎರಡೂ ಡೋರ್ ಜಖಂಗೊಂಡಿರುತ್ತದೆ.

4. ಇಂಜಿನ್ ಬಾಡಿ, ಮುಂದಿನ ಬಂಪರ್ ಜಖಂ ಗೊಂಡಿರುತ್ತದೆ.

5. ಎಡ ಮತ್ತು ಬಲ ಬದಿಯ ಬಾಡಿ ಡೆಂಡ್ ಆಗಿರುತ್ತದೆ.

6. ಟಾಪ್ ಬಾಡಿ, ಡ್ಯಾಶ್ ಬೋರ್ಡ್, ಸ್ಟೆರೀಂಗ್ ಸಿಸ್ಟಮ್, ಬಾಡಿ ಶೆಲ್ಪ್ ಜಖಂಗೊಂಡಿರುತ್ತದೆ.

ಎರಡೂ ವಾಹನಗಳನ್ನು ತಟಸ್ಥ ಸ್ಥಿತಿಯಲ್ಲಿ ಪರಿಶೀಲಿಸಿದ್ದು, ಬ್ರೇಕುಗಳು ಸುಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ನನ್ನ ಅಭಿಪ್ರಾಯದಂತೆ ಅಪಘಾತವು ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ವರದಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಯನ್ನು ನಿಪಿ-20 ಎಂದು, ಸಾಕ್ಷಿ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಆರ್ ಎನ್ ರವರಿಂದಃ**

ಘಟನೆ ನಡೆದ 2 ದಿನಗಳ ನಂತರ ವಾಹನಗಳನ್ನು ಪರಿಶೀಲಿಸಿದ್ದು ಎಂದರೆ ಸರಿ. ಠಾಣಾ ಆವರಣದಲ್ಲಿ ವಾಹನಗಳನ್ನು ಪರಿಶೀಲಿಸಿರುತ್ತೇನೆ. ಪ್ಯಾಸೆಂಜರ್ ಬಸ್ಸಿನ ಮುಂಭಾಗದ ಅಗಲ 8 ಅಡಿ ಇರಬಹುದು. ಸ್ಯಾಂಟ್ರೋ ಕಾರಿನ ಮುಂಭಾಗದ ಅಗಲ ಸುಮಾರು 4 ಅಡಿ ಇರಬಹುದು. ವಾಹನಗಳನ್ನು ಪರಿಶೀಲಿಸಿದಾಗ ಬಸ್ಸು ಮತ್ತು ಕಾರಿನ ವಿಂಡ್ ಶೀಲ್ಡ್ ಪುಡಿಯಾಗಿತ್ತು ಎಂದರೆ ಸರಿ. ವಾಹನಗಳನ್ನು ಪರಿಶೀಲಿಸಿಲ್ಲ ಎಂದರೆ ಸರಿಯಲ್ಲ. ಕಚೇರಿಯಲ್ಲಿ ವರದಿ ತಯಾರಿಸಿ ವಿತರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**